<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.81/2018. . P.W.-2.**

ದಿನಾಂಕ:**28.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

<u>ಪಾಟೀ ಸವಾಲು:</u> ಪ್ರತಿವಾದಿಯರ ಪರ ಶ್ರೀ ಕೆ ಜಿ ಪಿ ವಕೀಲರಿಂದ:-

ನಾನು 9 ನೇ ತರಗತಿ ಓದಿರುತ್ತೇನೆ. ನನ್ನ ಜನ್ಮ ದಿ:10.06.1984. ನಾನು ಕಡೂರಿನ ನ್ಯಾಯಾಲಯದಲ್ಲಿ ಹಲವಾರು ಕೇಸುಗಳಲ್ಲಿ ಹಾಜರಾಗುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನದು ಒಂದು ಸಿವಿಲ್ ದಾವೆ ಇದೆ, ಸದರಿ ದಾವೆಯನ್ನು 2025 ರಲ್ಲಿ ಹಾಕಿರುತ್ತೇನೆ. 1 ನೇ ವಾದಿ ಬೊಮ್ಮಣ್ಣನಿಗೆ ಸುಮಾರು 60 ವರ್ಷ ವಯಸ್ಸಾಗಿದೆ. 2 ನೇ ವಾದಿ ನನ್ನ ಚಿಕ್ಕಂದಿನಿಂದಲೂ ಪರಿಚಯ ಹಾಗೂ ನನ್ನ ಮತ್ತು 2 ನೇ ವಾದಿಯ ಮನೆ ಅಕ್ಕ-ಪಕ್ಕದಲ್ಲಿ ಇದೆ. 1 ನೇ ವಾದಿಯ ತಂದೆ ಕಡೂರಿನ ಓಬಾಳಪ್ಪರವರು ಕಡೂರಿನ ಸುಭಾಶ್ ನಗರದ ವಾಸಿ ಎಂದರೆ ಸಾಕ್ಷಿಯು ಅವರು ಬೀರೂರಿನಲ್ಲಿಯೂ ಸಹ: ಇರುತ್ತಿದ್ದರು ಎಂದು ನುಡಿಯುತ್ತಾರೆ. ಓಬಾಳಪ್ಪ ರವರಿಗೆ 1 ನೇ ವಾದಿ ಮಾತ್ರ ಗಂಡು ಮಗ ಎಂದರೆ ಸರಿ. 1 ನೇ ವಾದಿಯು ತನ್ನ ತಂದೆಯ ಜೊತೆ ಬೀರೂರಿನಲ್ಲಿ ವಾಸವಾಗಿರಬಹುದಿತ್ತು ಆದರೆ ಅವರು ಆ ರೀತಿ ವಾಸಮಾಡಿರುವುದಿಲ್ಲ ಎಂದರೆ ಸಾಕ್ಷಿಯು 1 ನೇ ವಾದಿಯು ಬೀರೂರು ಮತ್ತು ಕಡೂರು ಎರಡೂ ಕಡೆಯು ವಾಸವಾಗಿರುತ್ತಿದ್ದರು ಎಂದು ನುಡಿಯುತ್ತಾರೆ. ಓಬಾಳಪ್ಪ ರವರು 1 ನೇವಾದಿಯ ಜೊತೆ ಬೀರೂರಿನಲ್ಲಿ ವಾಸವಾಗಿದ್ದರು ಎಂಬ ಬಗ್ಗೆ ಪಡಿತರ ಚೀಟಿ ಅಥವಾ ಚುನಾವಣಾ ಗುರುತಿನ ಚೀಟಿಯನ್ನು ಯಾವುದಾದರೂ ಮಾಡಿಸಿರುತ್ತಾರೆಯೇ ಎಂದು ನನಗೆ ಗೊತ್ತಿಲ್ಲ. ನಾನು 1 ನೇ ವಾದಿಯ ಪಡಿತರ ಚೀಟಿ ಅಥವಾ ಚುನಾವಣಾ ಗುರುತಿನ ಚೀಟಿಯನ್ನು ನೋಡಿರುವುದಿಲ್ಲ. ಓಬಾಳಪ್ಪ ರವರ ಜೊತೆ 1 ನೇ ವಾದಿಯು ಯಾವತ್ತು ಸಹ: ಬೀರೂರಿನ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿಯು ಸಣ್ಣ ವಯಸ್ಸಿನಲ್ಲಿಯೇ ತಂದೆಯನ್ನು ಬಿಟ್ಟು ಹೋಗಿದ್ದರು ಎಂದರೆ ಸರಿಯಲ್ಲ.

ಓಬಾಳಪ್ಪ ರವರಿಗೆ ಒಂದು ಕಾಲು ಸರಿ ಇರಲಿಲ್ಲ ಹಾಗೂ ಆರೋಗ್ಯ ಸಮಸ್ಯೆ ಇತ್ತು ಎಂದರೆ ಸರಿ. ಓಬಾಳಪ್ಪ 1 ನೇ ಹೆಂಡತಿಯಿಂದ 1 ನೇ ವಾದಿ ಒಬ್ಬನೇ ಮಗ ಎಂದರೆ ಸರಿ. ಓಬಾಳಪ್ಪ ರವರಿಗೆ 2 ನೇ ಹೆಂಡತಿಯಾದ 3 ನೇ ಪ್ರತಿವಾದಿ ಜಯಮ್ಮ ರವರಿಂದ 5 ನೇ ಪ್ರತಿವಾದಿ ರೇಣುಕಮ್ಮ ಒಬ್ಬಳೇ ಮಗಳು ಎಂದರೆ ಸರಿಯಲ್ಲ. 1 ಮತ್ತು 3 ನೇ ಪ್ರತಿವಾದಿಯ ಮದುವೆ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಓಬಾಳಪ್ಪ

ರವರು ಕಡೂರಿನಲ್ಲಿ ವಾಸವಾಗಿದ್ದ ಮನೆಯನ್ನು ನಾನು ನೋಡಿರುತ್ತೇನೆ, ಆ ರೀತಿ ಸುಮಾರು 10 ವರ್ಷಗಳ ಹಿಂದೆ ಮನೆ ನೋಡಿರುತ್ತೇನೆ.

ಈ ದಾವೆಯನ್ನು ಸೈಟಿಗೆ ಹಾಕಿರುತ್ತಾರೆ. ಸದರಿ ಸೈಟಿನ ಹಕ್ಕು ಪತ್ರವನ್ನು 1 ನೇ ಪ್ರತಿವಾದಿಗೆ ನೀಡಿರುತ್ತಾರೆ. ಹಕ್ಕು ಪತ್ರವನ್ನು ಪುರಸಭೆಯಿಂದ ನೀಡಿರುತ್ತಾರೆ. ಸದರಿ ಹಕ್ಕು ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಹಕ್ಕು ಪತ್ರವನ್ನು 1 ನೇ ವಾದಿಯು ತೋರಿಸಿದ್ದಾಗ ಅವರ ಮನೆಯಲ್ಲಿ ನೋಡಿರುತ್ತೇನೆ.

ಈಗ ನೋಡುತ್ತಿರುವ ಹಕ್ಕು ಪತ್ರದ ಜೆರಾಕ್ಸ್ ಪ್ರತಿಯು ಸದರಿ ಹಕ್ಕು ಪತ್ರವೇ ಆಗಿರುತ್ತದೆ. ಸದರಿ ಹಕ್ಕು ಪತ್ರದ ಮೂಲ ಪ್ರತಿ ಈಗ ಯಾರ ಬಳಿ ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ರುಜುವಾತುಪಡಿಸುವ ಷರತ್ತಿಗೆ ಒಳಪಟ್ಟು ಅದನ್ನು ನಿಡಿ 6 ಎಂದು ಗುರುತಿಸಲಾಯಿತು. ನಿಡಿ6 ನ್ನು 1976-77 ರಲ್ಲಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 6 ನ್ನು ನೀಡುವಾಗ 1 ನೇ ವಾದಿ ಜನಿಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ ಎಂದರೆ ಜನಿಸಿದ್ದರು.

1 ನೇ ಪ್ರತಿವಾದಿಗೆ ವಾಸದ ಮನೆ ಇರಲಿಲ್ಲ ಎಂದು ಸರ್ಕಾರದವರು ಮನೆ ಮಂಜೂರು ಮಾಡಿ ನೀಡಿದ ಹಕ್ಕು ಪತ್ರವೇ ನಿಡಿ 6 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಮೂಲಕವಾಗಿ ನಿಡಿ 6 ರ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ 1 ನೇ ಪ್ರತಿವಾದಿ ಕಿಮ್ಮತ್ತು ಕಟ್ಟಿರುತ್ತಾರೆ ಎಂದು ನನಗೆ ಹೇಳಿರುತ್ತಾರೆ. ನನಗೆ ಕನ್ನಡ ಓದಲು - ಬರೆಯಲು ಬರುತ್ತದೆ. ನಿಡಿ 6 ರಲ್ಲಿ ಕಿಮ್ಮತ್ತು ಕಟ್ಟಿರುವ ಬಗ್ಗೆ ನಮೂದು ಇದೆಯೇ ಎಂದರೆ ಸಾಕ್ಷಿಯು ನಿಡಿ6 ನ್ನು ನೋಡಿ ನಮೂದು ಇಲ್ಲ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯು ಬದುಕಿರುವವರೆಗೂ 1 ನೇ ವಾದಿ ಅವರ ಜೊತೆ ಇರಲಿಲ್ಲ, ಹಾಗಾಗಿ ಅವರ ಜೀವನ ನಿರ್ವಹಣೆಗಾಗಿ 1 ನೇ ಪ್ರತಿವಾದಿಯು ದಾವಾ ಸ್ವತ್ತನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ09.12.2017 ರಂದು 1 ರಿಂದ 3, 5 ನೇ ಪ್ರತಿವಾದಿಗಳು ಸೇರಿ ದಾವಾ ಸ್ವತ್ತನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯ ಜ್ಞಾನ ಸರಿ ಇರಲಿಲ್ಲ. 1 ನೇ ಪ್ರತಿವಾದಿಗೆ ಜ್ಞಾನ ಸರಿ ಇರಲಿಲ್ಲ ಎಂಬ ನನಗೆ ಕಳೆದ 10 ವರ್ಷಗಳ ಹಿಂದಿನಿಂದಲೂ ಗೊತ್ತು. 1 ನೇ ಪ್ರತಿವಾದಿಗೆ ಜ್ಞಾನ ಸರಿ ಇರಲಿಲ್ಲ ಎಂಬ ವಿಚಾರವನ್ನು 1 ನೇ ವಾದಿಯು ವಾದಪತ್ರದಲ್ಲಿ ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ನನ್ನ

ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿಗೆ ಜ್ಞಾನ ಸರಿ ಇರಲಿಲ್ಲ ಎಂಬ ವಿಚಾರವನ್ನು ಹೇಳಿರುವುದಿಲ್ಲ.

ದಾವಾ ಸ್ವತ್ತನ್ನು ಖರೀದಿಸಿದ ದಿನದಿಂದ ಈ ವರೆಗೂ 4 ನೇ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಖರೀದಿಸಿದ ದಿನದಿಂದ ಖಾತೆಯು ಸಹಃ 4 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಅವರು ಗೊತ್ತಿಲ್ಲದಂತೆ ಮಾಡಿಸಿಕೊಂಡಿರುತ್ತಾರೆ. ನಾನು ಮತ್ತು 2 ನೇ ವಾದಿ ಮೊದಲಿನಿಂದಲೂ ವಿಶ್ವಾಸದಿಂದ ಇರುವ ಕಾರಣ ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಸಹಃ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು 2 ನೇ ವಾದಿ ಬರೆಸಿದರು ಎಂದರೆ ಸರಿಯಲ್ಲ. 2 ನೇ ವಾದಿಯ ಹೇಳಿಕೊಟ್ಟಂತೆ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾದ ಕಾರಣ ಅದರಲ್ಲಿ ವಾದಿಗಳಿಗೆ ಯಾವುದೇ ಹಕ್ಕುಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಅವರ ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.